ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/66/2015-16. ದಿನಾಂಕ:24-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಓಬಮ್ಮ ಗಂಡ ಪಾಪಯ್ಯ<br>2)ಜಿ.ಬಸಪ್ಪ ತಂದೆ ಲೇಟ್ ಗೋವಿಂದಪ್ಪರ ಕರಿಯಪ್ಪ<br>3)ನಿಂಗಮ್ಮ ಗಂಡ ಬಸಪ್ಪ.<br>4)ಸಿದ್ದಮ್ಮ ಗಂಡ ಸಣ್ಣ ಓಬಪ್ಪ<br>ಹಾಗೂ ಇತರರು<br>ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು | 1)ಜಿ.ನಾಗಪ್ಪ ತಂದೆ ಲೇಟ್ ಓಬಳಪ್ಪ<br>2)ರುದ್ರಪ್ಪ ತಂದೆ ಲೇಟ್ ಬಸಪ್ಪ<br>3)ನುಂಕಪ್ಪ ತಂದೆ ಲೇಟ್ ಬಸಪ್ಪ<br>4)ಪಾಪಯ್ಯ ತಂದೆ ಲೇಟ್ ಓಬಯ್ಯ<br>5)ಮಂಜಪ್ಪ ತಂದೆ ಬಸಪ್ಪ<br>ಚೌಡಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 690ಬಿ. 932ಸಿ. 940. 943ಸಿ, 944ಬಿ. 944ಸಿ. ವಿಸ್ತೀರ್ಣ 1-36. 2-19. 6-06. 0-97. 3-09. 1-84. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 690ಬಿ. 932ಸಿ. 940. 943ಸಿ, 944ಬಿ. 944ಸಿ. ವಿಸ್ತೀರ್ಣ 1-36. 2-19. 6-06. 0-97. 3-09. 1-84. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಜಿ.ಬಸಪ್ಪ ತಂದೆ ಲೇಟ್ ಗೋವಿಂದಪ್ಪರ ಕರಿಯಪ್ಪ. ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚೌಡಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 05-08-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಜಿ.ನಾಗಪ್ಪ ತಂದೆ ಲೇಟ್ ಓಬಳಪ್ಪ. ರುದ್ರಪ್ಪ ತಂದೆ ಲೇಟ್ ಬಸಪ್ಪ. ನುಂಕಪ್ಪ ತಂದೆ ಲೇಟ್ ಬಸಪ್ಪ. ಪಾಪಯ್ಯ ತಂದೆ ಲೇಟ್ ಓಬಯ್ಯ. ಮಂಜಪ್ಪ ತಂದೆ ಬಸಪ್ಪ. ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 04/2014-15. ದಿನಾಂಕ 06-09-2014 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 03-11-2015 ರಿಂದ 24-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರ ಚೌಡಾಪುರ ಗ್ರಾಮದ ಸನಂ 690ಬಿ. 932ಸಿ. 940. 943ಸಿ, 944ಬಿ. 944ಸಿ. ವಿಸ್ತೀರ್ಣ 1-36. 2-19. 6-06. 0-97. 3-09. 1-84. ಎಕ್ರೆ ಜಮೀನುಗಳು ನನ್ನ ದತ್ತು ತಂದೆಯವರಾದ ಕರಿಯಪ್ಪ ತಂದೆ ನುಂಕಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಇವರಿಗೆ ಸಂತಾನ ಇಲ್ಲದ ಕಾರಣ ನನ್ನನ್ನು ದಿನಾಂಕ 12-12-2006 ರಂದು ಡಾಕ್ಯುಮೆಂಟ್ ನಂಬರ್: 09/2006-07 ರ ಪ್ರಕಾರ ದತ್ತು ಸ್ವೀಕೃತಿ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಸದರಿ ಕರಿಯಪ್ಪ ತಂದೆ ನುಂಕಪ್ಪ ಇವರು ದಿನಾಂಕ 10-06-2009 ರಂದು ಹಾಗೂ ನನ್ನ ದತ್ತು ತಾಯಿಯವರಾದ ಜಿ.ಮಾರೆಮ್ಮ ಗಂಡ ಜಿ.ಕರಿಯಪ್ಪ ಇವರು ದಿನಾಂಕ 01-04-2010 ರಂದು ನಿಧನ

ಹೊಂದಿರುತ್ತಾರೆ. ಕಾರಣ ಸದರಿ ಕರಿಯಪ್ಪ ತಂದೆ ನುಂಕಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ನನ್ನ ಹೆಸರನ್ನು ಪೂರ್ವ ಪಟ್ಟದಾರರ ಜೋತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಅವರು ಸದರಿ ವಿವಾದಿತ ಜಮೀನುಗಳ ಬಗ್ಗೆ ಉಭಯರು ರಾಜಿಯಾಗಿ ಜಂಟಿ ಖಾತೆದಾರರಾದ ಕರಿಯಪ್ಪ ತಂದೆ ನುಂಕಪ್ಪ ಇವರ ಹೆಸರನ್ನು ಕಡಿಮೆ ಮಾಡಿ ದಿನಾಂಕ 12-12-2006 ರ ದತ್ತು ಸ್ವೀಕೃತಿ ನೊಂದಾಯಿತ ಪತ್ರ ಪ್ರಕಾರ ಅರ್ಜಿದಾರರಾದ ಜಿ.ಬಸಪ್ಪ ತಂದೆ ಲೇಟ್ ಜಿ.ಕರಿಯಪ್ಪ, ಇವರ ಹೆಸರನ್ನು ಸೇರ್ಪಡೆ ಮಾಡಲು ನಮ್ಮಗಳ ಸಂಪೂರ್ಣ ಒಪ್ಪಿಗೆ ಇದ್ದು ಯಾವುದೇ ತರವಾದ ಆಕ್ಷೇಪಣೆಗಳು ಇಲ್ಲವೆಂದು ಹೇಳಿಕೆಯನ್ನು ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ದಾಖಲೆಗಳನ್ನು ಸಲ್ಲಿಸಿರುವುದರಿಂದ ಅವರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 690ಬಿ. 932ಸಿ. 940. 943ಸಿ, 944ಬಿ. 944ಸಿ. ವಿಸ್ತೀರ್ಣ 1-36. 2-19. 6-06. 0-97. 3-09. 1-84. ಎಕ್ರೆ ಜಮೀನುಗಳಲ್ಲಿ ಕರಿಯಪ್ಪ ತಂದೆ ನುಂಕಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಜಿ. ಬಸಪ್ಪ ತಂದೆ ಲೇಟ್ ಗೋವಿಂದಪ್ಪರ ಕರಿಯಪ್ಪ ಇವರ ಹೆಸರನ್ನು ಪೂರ್ವ ಪಟ್ಟದಾರರ ಜೋತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 24-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ನಾಡಕಛೇರಿ, ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಜಿ.ಬಸಪ್ಪ ತಂದೆ ಲೇಟ್ ಗೋವಿಂದಪ್ಪರ ಕರಿಯಪ್ಪ ಹಾಗೂ ಇತರರು ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಜಿ.ನಾಗಪ್ಪ ತಂದೆ ಲೇಟ್ ಓಬಳಪ್ಪ ರುದ್ರಪ್ಪ ತಂದೆ ಲೇಟ್ ಬಸಪ್ಪ ಹಾಗೂ ಇತರರು ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.